# ನಮ್ಮ ಪರಿಚಯ

ಸಾರಿ ಬಾ ಸರ್ವರ್ಗೆ ಸ್ವಾತಂತ್ರ್ಯಮಂ

ಸಾರಿ ಬಾ ಸರ್ವರ್ಗೆ ಸ್ವಾಮ್ಯತ್ವಮಂ

ಸರ್ವರ್ಗೆ ಸಾರಿ ಬಾ ಸೌಹಾರ್ದಮಂ

ಸರ್ವಲೋಕದ ಸರ್ವ ಸಂತೋಷಮಂ

ಸರ್ವರಿಂ ಸರ್ವರ ಉದ್ದಾರಮಂ.

**:ರಾಷ್ಟ್ರಕವಿ ಕುವೆಂಪು:**

## ಪ್ರಸ್ತಾವನೆ

ಈ ಕವಿವಾಣಿಯಲ್ಲಿ ರಾಷ್ಟ್ರ ಕವಿಯು ಕರೆ ಕೊಟ್ಟಿರುವಂತೆ ಸರ್ವೋದಯವು ಸರ್ವರಿಂದ ಸಾಧಿತವಾಗಬೇಕು. ಅರ್ಥಾತ್ "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬ ಸಹಕಾರ ತತ್ವದ ಭದ್ರ ಬುನಾದಿಯ ಮೇಲೆ ಸರ್ವೋದಯ ಮತ್ತು ಅಂತ್ಯೋದಯ ಸಾಧಿತವಾಗಬೇಕು. ಬಡವರಿಂದ ಬಡವರಿಗಾಗಿ ಬಡವರೇ ಸೇರಿ ರೂಪಿಸಿಕೊಂಡ ಸಹಕಾರಿ ಚಳುವಳಿ ರಾಷ್ಟ್ರಜೀವನದ ಆಂದೋಲನವಾಗಿ ಬೆಳೆದು ರಾಷ್ಟ್ರಪಿತನ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವತ್ತ ಅದು ಮುನ್ನುಗ್ಗಬೇಕು.

## ಪರಿಚಯ

ಇಂತಹ ಒಂದು ರಾಷ್ಟ್ರೀಯ ಆಂದೋಲನವನ್ನು ದಿಕ್ಕು ತಪ್ಪದಂತೆ ಕೈಹಿಡಿದು ನಡೆಸುವುದು, ಬೆಳೆಸುವುದು ಹಾಗೂ ಪೋಷಿಸುವುದು ಪ್ರತಿಯೊಂದು ನಾಗರೀಕ ಸರ್ಕಾರದ ಕರ್ತವ್ಯವಾಗಿದ್ದು,ಈ ಬದ್ದತೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ೧೯೭೭ ನೇ ಸಾಲಿನಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯನ್ನು ಶಾಸನಬದ್ದವಾಗಿ ಸ್ಥಾಪಿಸಿರುತ್ತದೆ. ಕರ್ನಾಟಕ ರಾಜ್ಯ ಸಹಕಾರಿ ಕಾಯ್ದೆ ೧೯೫೯ ರ ಕಲಂ ೬ ರಡಿಯಲ್ಲಿ ನೋಂದಣಿಯಾದ ರಾಜ್ಯದ ವಿವಿದ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸುವುದಾಗಿರುತ್ತದೆ. ಈ ಇಲಾಖೆಯ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿದ್ದು, ೪ ಜಂಟಿ ನಿರ್ದೇಶಕರಿಂದ ಸಹಕರಿಸಲ್ಪಡುತ್ತಾರೆ. ಜಿಲ್ಲಾಮಟ್ಟದ ಕಛೇರಿಗಳಲ್ಲಿ ಉಪ ನಿರ್ದೇಶಕರು ಉಪ ವಿಭಾಗೀಯ ಮಟ್ಟದಲ್ಲಿ ಸಹಾಯಕ ನಿರ್ದೇಶಕರು ತಾಲ್ಲೂಕು ಮಟ್ಟದಲ್ಲಿ ಹಿರಿಯ ಲೆಕ್ಕಪರಿಶೋಧಕರು ಕಛೇರಿಯ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಎಲ್ಲಾ ಹಂತಗಳಲ್ಲಿಯೂ ಲೆಕ್ಕಪರಿಶೋಧಕರು : ಸಹಾಯಕ ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

## ಉದ್ದೇಶ

ಪ್ರಸ್ತುತ ಭಾರತದ ಅನೇಕ ರಾಜ್ಯಗಳಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಸಹಕಾರಿ ಚಳುವಳಿ ರಾಜ್ಯ ಸರ್ಕಾರದಿಂದ ಪ್ರೇರೆಪಿಸಲ್ಪಟ್ಟ ಮತ್ತು ಪೋಷಿಸಲ್ಪಟ್ಟ ಚಳುವಳಿಯಾಗಿದೆ. ಅದರ ಫಲಿತಾಂಶವಾಗಿ ರಾಜ್ಯದಲ್ಲಿ ವಿವಿಧ ಉದ್ದೇಶಗಳಿಗಾಗಿ ಸಂಸ್ಥೆಯ ಸದಸ್ಯರ, ರೈತರ ಮತ್ತು ಸಾರ್ವಜನಿಕರ ಆರ್ಥಿಕ ಮತ್ತು ಸಾಮಾಜಿಕ ಏಳಿಗೆಗಾಗಿ ಹಲವಾರು ಸೌಲಭ್ಯಗಳನ್ನು ಒದಗಿಸಲು ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಸಹಕಾರಿ ಬ್ಯಾಂಕುಗಳು, ಸಹಕಾರಿ ಸಕ್ಕರೆ ಕಾರ್ಖಾನೆ, ಸಹಕಾರಿ ನೂಲಿನ ಗಿರಣಿ, ಗೃಹ ನಿರ್ಮಾಣ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಸಂಸ್ಕರಣ ಹಾಗೂ ಮಾರಾಟ ಸಹಕಾರ ಸಂಘಗಳು ಜನ್ಮ ತಳೆದಿರುತ್ತವೆ. ಘನ ಸರ್ಕಾರವು ಕಡು ಬಡವರ, ದೀನ ದಲಿತರ ಹಾಗೂ ಶೋಷಿತರ ಸ್ವಾವಲಂಬನೆಗಾಗಿ, ರೈತಾಪಿ ಜನಾಂಗದ ಬದುಕಿನ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ದಿಪಡಿಸುವ ಸಲುವಾಗಿ ಈ ಸಹಕಾರ ಸಂಘಗಳ ಮೂಲಕ ಸಹಾಯಧನ, ಅನುದಾನ ಹಾಗೂ ಸಾಲಗಳನ್ನು ನೀಡುವ ಮೂಲಕ ರಾಜ್ಯದ ಅಭಿವೃದ್ದಿಯು ಸಮಾಜದ ಎಲ್ಲಾ ಸ್ಥರಗಳಲ್ಲಿ ಸಮಾನವಾಗಿ ಹಂಚಿಹೋಗುವಂತೆ ಮಾಡಲು ಈ ಸಹಕಾರ ಸಂಘಗಳನ್ನು ವಾಹಕಗಳನ್ನಾಗಿ ಬಳಸಿಕೊಳ್ಳುತ್ತಿದೆ. ಇದರೊಂದಿಗೆ ಸಾರ್ವಜನಿಕರೂ ಸಹ ಈ ಸಹಕಾರ ಸಂಘಗಳಲ್ಲಿ ತಮ್ಮ ಹಣ ತೊಡಗಿಸಿದ್ದು, ಅವುಗಳ ವ್ಯವಹಾರದಲ್ಲಿ ನೇರವಾಗಿ ಭಾಗವಹಿಸಿರುತ್ತಾರೆ.

ಈ ರೀತಿ ಸಹಕಾರ ಸಂಘಗಳಲ್ಲಿ ತೊಡಗಿಸಲ್ಪಟ್ಟ ಸರ್ಕಾರದ ಹಾಗೂ ಸಾರ್ವಜನಿಕರ ಹಣ ಮತ್ತು ಆಸ್ತಿಗಳನ್ನು, ಸಂಘದ ಆಡಳಿತ ಮಂಡಳಿ ಅಥವಾ ಅಧಿಕಾರಿ ವರ್ಗ ನಿರಂಕುಶವಾಗಿ ದುರುಪಯೋಗ ಮಾಡದಂತೆ ಹಾಗೂ ದುರ್ವಿನಿಯೋಗಿಸದಂತೆ ಸರ್ಕಾರ ಬಳಸುತ್ತಿರುವ ಅಂಕುಶವೇ ಸಹಕಾರಿ ಲೆಕ್ಕಪರಿಶೋಧನೆ. ಇದು ಕೇವಲ ಸಂಸ್ಥೆಯ ಲೆಕ್ಕ ಪತ್ರಗಳು ಮತ್ತು ಆರ್ಥಿಕ ತ:ಖ್ತೆಗಳ ಪರಿಶೀಲನೆಗೆ ಮಾತ್ರವೇ ಸೀಮಿತವಾಗಿರದೇ ಸಂಸ್ಥೆಯ ಆಡಳಿತದ ಚುಕ್ಕಾಣಿ ಹಿಡಿದ ಆಡಳಿತ ಮಂಡಳಿಯ ಕಾರ್ಯ ನಿರ್ವಹಣೆ, ಅಧಿಕಾರಿ ವರ್ಗದ ಕರ್ತವ್ಯ ಲೋಪ, ಕಾನೂನು ಕಾಯ್ದೆಗಳ ಹಾಗೂ ಉಪ ನಿಯಮಗಳ ಉಲ್ಲಂಘನೆ ಮುಂತಾದ ಅಂಶಗಳನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡುವ ವಿಶಿಷ್ಟ ಅಧಿಕಾರವನ್ನು ಹೊಂದಿರುತ್ತದೆ. ಈ ಬಗೆಯ ಲೆಕ್ಕ ಪರಿಶೋಧನೆ ಇತರ ವೃತ್ತಿಪರ ಲೆಕ್ಕಪರಿಶೋಧನೆಗಿಂತ ಭಿನ್ನವೂ ಹಾಗೂ ವೈಶಿಷ್ಟ ಪೂರ್ಣವೂ ಆಗಿರುತ್ತದೆ.

ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಫರ್ಮ್ ಸಂಘಕ್ಕೆ ಸೇರಿದ ಎಲ್ಲಾ ಪುಸ್ತಕಗಳನ್ನು, ಲೆಕ್ಕ ಪತ್ರಗಳನ್ನು, ದಾಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಸಂಘದ ನೊಂದಾಯಿತ ಕಛೇರಿಯಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಅಥವಾ ಸಂಘದ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಪರಿಶೀಲಿಸಲು ಅವಕಾಶವಿರುತ್ತದೆ.

**ಸಹಕಾರ ಸಂಘಗಳಲ್ಲಿ ಸ್ವರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಪ್ರಭುತ್ವ ನಿಯಂತ್ರಣ ಮತ್ತು ಆಡಳಿತದಲ್ಲಿ ವೃತ್ತಿಪರತೆಯನ್ನು ಉತ್ತೇಜಿಸುವ ಸಲುವಾಗಿ ಭಾರತ ಸರ್ಕಾರವು ೧೫ನೇ ಜನವರಿ ೨೦೧೨ ರಂದು ಸಂವಿಧಾನಕ್ಕೆ ೯೭ನೇ ತಿದ್ದುಪಡಿಯನ್ನು ತಂದಿರುತ್ತದೆ. ಅದಕ್ಕನುಗುಣವಾಗಿ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ಕ್ಕೆ ತಿದ್ದುಪಡಿಯನ್ನು ಮಾಡಿರುತ್ತದೆ. ತಿದ್ದುಪಡಿ ಅನುಸಾರ ಪ್ರತೀ ಸಹಕಾರ ಸಂಘವು ಅವುಗಳ ಸಾಮಾನ್ಯ ಸಭೆಯಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿರ್ವಹಿಸುವ ಅರ್ಹ ಲೆಕ್ಕಪರಿಶೋಧಕರ ಪಟ್ಟಿಯಿಂದ ಲೆಕ್ಕಪರಿಶೋಧಕರನ್ನು ಅಥವಾ ಲೆಕ್ಕಪರಿಶೋಧನಾ ಫರ್ಮ್ ಅನ್ನು ನೇಮಕ ಮಾಡಿಕೊಂಡು ಅವುಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿಕೊಳ್ಳಬೇಕಿರುತ್ತದೆ.**

ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಶಾಸನಬದ್ದ ಕಾಯಿದೆ ಕಲಂಗಳು ಮತ್ತು ನಿಯಮಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ೧೯೫೯ ಹಾಗೂ ನಿಯಮಗಳು ೧೯೬೦ ಇವುಗಳ ಈ ಕೆಳಕಂಡ ಅಂಶಗಳು ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಪ್ರಮುಖವಾದ ಅಂಶಗಳಾಗಿರುತ್ತವೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೩(೧) ರನ್ವಯ "ಪ್ರತಿಯೊಂದು ಸಹಕಾರ ಸಂಘವು ಕನಿಷ್ಟ ವರ್ಷಕ್ಕೊಮ್ಮೆಯಾದರೂ ತನ್ನ ಲೆಕ್ಕ ಪತ್ರಗಳನ್ನು ಪ್ರತಿ ಸಹಕಾರ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧನಾ ಫರ್ಮುಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರ ಸಂಘದ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕನಿಂದ ಅಥವಾ ಲೆಕ್ಕಪರಿಶೋಧನಾ ಫರ್ಮಿನಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು". (ನಿಯಮ ೨೯ರ ಉಪ ನಿಯಮ ೬, ೮ , ೯ ಮತ್ತು ೧೨)

ಕಾಯ್ದೆ ಕಲಂ ೬೩(೪) ರನ್ವಯ ಈ ಪ್ರಕರಣದ (೧)ನೇ ಉಪ-ಪ್ರಕರಣದಡಿ ಅಥವಾ ೯೮-ಯು ಪ್ರಕರಣದ ಅಥವಾ ೯೮-ವಿ ಪ್ರಕರಣದ ಅಡಿಯಲ್ಲಿಯ ಲೆಕ್ಕಪರಿಶೋಧನೆಯು, ಸುಸ್ತಿಯಾದ ಋಣಗಳು ಯಾವುದಾದರೂ ಇದ್ದರೆ ಅವುಗಳ ಪರೀಕ್ಷಣೆ, ಆಸ್ತಿಗಳ ಮತ್ತು ಹೊಣೆಗಳ ಭೌತಿಕ ಪರಿಶೀಲನೆ ಮತ್ತು ಮೌಲ್ಯನಿರ್ಧರಣೆ, ನಗದು ಶಿಲ್ಕಿನ ಮತ್ತು ಭದ್ರತಾ ಪತ್ರಗಳ ಪರಿಶೀಲನೆ, ಲಾಭ ಅಥವಾ ನಷ್ಟದ ದೃಢೀಕರಣ, ಭಾರತೀಯ ರಿಸರ್ವ್ ಬ್ಯಾಂಕಿನ ಅಥವಾ ನಬಾರ್ಡಿನ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಒಳಗೊಂಡಂತೆ ಸಹಕಾರ ಸಂಘಗಳಿಗೆ ಅನ್ವಯವಾಗುವ ಇತರ ಕಾನೂನುಗಳ ಮತ್ತು ಪಾರದರ್ಶಕತೆ ಕಾನೂನಿನ ಪಾಲನೆ ಹಾಗೂ ಸಂಘದ ಕಾರ್ಯನಿರ್ವಹಣೆ ಮತ್ತು ನಿಯಮಿಸಲಾದ ಇತರ ವಿವರಗಳ ಪರೀಕ್ಷಣೆ ಇವುಗಳನ್ನು ಒಳಗೊಂಡಿರತಕ್ಕದ್ದು.

ಕಾಯ್ದೆ ಕಲಂ೬೩(೫)ರನ್ವಯ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಫರ್ಮು ಸಂಘಕ್ಕೆ ಸೇರಿದ ಮತ್ತು ಅದರ ಅಭಿರಕ್ಷೆಯಲ್ಲಿರುವ ಅಥವಾ ಆಡಳಿತ ಮಂಡಳಿಯ ಯಾವೊಬ್ಬ ಸದಸ್ಯನ ಅಥವಾ ಪದಾಧಿಕಾರಿಯ ಅಥವಾ ಮುಖ್ಯ ಕಾರ್ಯನಿರ್ವಾಹಕನ ಅಥವಾ ಸಂಘದ ಇತರ ಯಾವುದೇ ನೌಕರನ ಅಭಿರಕ್ಷೆಯುಲ್ಲಿರುವ ಎಲ್ಲಾ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಮತ್ತು ಇತರೆ ಸ್ವತುಗಳನ್ನು (ನಿಯಮ ೨೯ರ ಉಪ ನಿಯಮ ೧) ಎಲ್ಲಾ ಕಾಲಗಳಲ್ಲಿ ಸಂಘದ ನೊಂದಾಯಿತ ಕಛೇರಿಯಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಅಥವಾ ಸಂಘದ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಹಾಜರುಪಡಿಸುವಂತೆ ,ಸಮನ್ ಮಾಡಲು ಹಾಗೂ ಪರಿಶೀಲಿಸುವ ಅವಕಾಶವಿರುತ್ತದೆ.

ಕಾಯ್ದೆ ಕಲಂ ೬೩(೭)ರನ್ವಯ ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಯು, ಸಹಕಾರ ವರ್ಷದ ಕೊನೆಯಲ್ಲಿ ಇದ್ದಂತೆ, ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ, ಲಾಭ ಮತ್ತು ನಷ್ಟ ತೋರಿಸುವಂಥ ಆರ್ಥಿಕ ತ:ಖ್ತೆಗಳನ್ನು ಮತ್ತು ಆಸ್ತಿ ಹೊಣೆ ಪಟ್ಟಿಯನ್ನು ನಿಯಮಿಸಬಹುದಾದಂಥ ಆರ್ಥಿಕ ತ:ಖ್ತೆಗಳನ್ನು ಮತ್ತು ಆಸ್ತಿ ಋಣ ಪಟ್ಟಿಯನ್ನು ನಿಯಮಿಸಬಹುದಾದಂತಹ ಷೆಡ್ಯೂಲ್‌ಗಳನ್ನು ಮತ್ತು ಇತರೆ ತಃಖ್ತೆಗಳನ್ನು ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧನಾ ಫರ್ಮಿನ ಮುಂದೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕಿರುತ್ತದೆ.

ಕಾಯ್ದೆ ಕಲಂ ೬೩(೧೪) ರನ್ವಯ ಲೆಕ್ಕಪರಿಶೋಧಕನು:-

(ಎ) ಸಹಕಾರ ಸಂಘದ ಭದ್ರತೆಯ ಆಧಾರದ ಮೇಲೆ ನೀಡಿರುವ ಸಾಲಗಳನ್ನು ಅಥವ ಮುಂಗಡಗಳನ್ನು ಸೂಕ್ತವಾಗಿ ಭದ್ರತೆ ಪಡೆದು ನೀಡಲಾಗಿದೆಯೇ? ಮತ್ತು ಯಾವ ನಿಬಂಧನೆಗಳ ಮೇಲೆ ಅವುಗಳನ್ನು ನೀಡಲಾಗಿದೆಯೋ ಆ ನಿಬಂಧನೆಗಳು ಸಂಘದ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಬಿ) ಕೇವಲ ಪುಸ್ತಕ ನಮೂದುಗಳಿಂದ ಪ್ರತಿನಿದಿಸಲ್ಪಡುವ ಸಹಕಾರ ಸಂಘದ ವ್ಯವಹಾರಗಳು ಅದರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಸಿ) ವೈಯಕ್ತಿಕ ವೆಚ್ಚಗಳನ್ನು ರಾಜಸ್ವ ಲೆಕ್ಕಕ್ಕೆ ಖರ್ಚು ಹಾಕಲಾಗಿದೆಯೇ ಎಂಬ ಬಗ್ಗೆ;

(ಡಿ) ಲೆಕ್ಕ ಪುಸ್ತಕಗಳಲ್ಲಿ ಮತ್ತು ಮತ್ತು ಆಸ್ತಿ ಹೊಣೆ ಪಟ್ಟ (ಅಡಾವೆ ಪತ್ರಿಕೆ)ಯಲ್ಲಿ ನಿರೂಪಿಸಲಾದ ಸ್ಥಿತಿಯು ಸರಿಯಾದುದೇ, ಕ್ರಮಬದ್ಧವಾದುದೇ ಮತ್ತು ದಾರಿ ತಪ್ಪಿಸುವಂಥದ್ದಲ್ಲವೇ ಎಂಬ ಬಗ್ಗೆ ಮತ್ತು

(ಇ) ವಿಚಾರಣೆ ಮಾಡುವ ಸಲುವಾಗಿ ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಉಲ್ಲೇಖಿಸಿದ ಯಾವುದೇ ವಿಶೇಷ ವಿವಾದಾಂಶ ಅಥವಾ ವಿಷಯದ ಬಗ್ಗೆ ವಿಧ್ಯುಕ್ತವಾಗಿ ವಿಚಾರಣೆ ಮಾಡಿ ಆ ಬಗೆಗಿನ ವರದಿಯನ್ನು ಸಂಬಂಧಿಸಿದವರಿಗೆ ಸಲ್ಲಿಸಲಾಗಿದೆಯೇ ಎಂಬ ಬಗ್ಗೆ ವಿಚಾರಣೆ ಮಾಡಬೇಕಿರುತ್ತದೆ.

(ನಿಯಮ ೨೯-ಬಿರ ಉಪ ನಿಯಮ ೧೧)

ಕಾಯ್ದೆ ಕಲಂ ೬೩(೧೫) ರನ್ವಯ ಲೆಕ್ಕಪರಿಶೋಧಕನು ತಾವು ಪರಿಶೀಲಿಸಿದ ಲೆಕ್ಕಗಳ ಬಗ್ಗೆ ಸಹಕಾರ ಸಂಘಕ್ಕೆ ವರದಿ ಮಾಡಬೇಕಿರುತ್ತದೆ. ಆ ವರದಿಯು ಅವನ ಅಭಿಪ್ರಾಯದಲ್ಲಿ ಮತ್ತು ಅವನಿಗೆ ಮಾಹಿತಿ ಇರುವಷ್ಟರಮಟ್ಟಿಗೆ ಮತ್ತು ಅವನಿಗೆ ದೊರೆತ ವಿವರಣೆಗಳ ಅನುಸಾರವಾಗಿ ಸದರಿ ಲೆಕ್ಕಗಳು ಆ ಅಧಿನಿಯಮದಲ್ಲಿ ಅಗತ್ಯಪಡಿಸಲಾದ ಮಾಹಿತಿಯನ್ನು ಹಾಗೆ ಅಗತ್ಯಪಡಿಸಿದ ರೀತಿಯಲ್ಲಿ ನೀಡಿರುವ ಕುರಿತು.

(ಎ) ಆಸ್ತಿ ಹೊಣೆ ಪಟ್ಟಗೆ ಸಂಬಂಧಿಸಿದಂತೆ

(ಬಿ) ಲಾಭ ಮತ್ತು ನಷ್ಟ ಲೆಕ್ಕ, ಸಹಕಾರ ವರ್ಷದ ಲಾಭ ಅಥವಾ ನಷ್ಟದ ಬಗ್ಗೆ.

ನಿಜವಾದ ಮತ್ತು ನ್ಯಾಯಸಮ್ಮತವಾದ ಚಿತ್ರಣವನ್ನು ನೀಡುವುದೇ ಎಂಬುದನ್ನು ನಿರೂಪಿಸಬೇಕಾಗಿದೆ.

ಕಾಯ್ದೆ ಕಲಂ ೬೩(೧೬)ರನ್ವಯ ಲೆಕ್ಕಪರಿಶೋಧಕನ ವರದಿಯು

(ಎ) ಅವನು, ಲೆಕ್ಕಪರಿಶೋಧನೆ ಮಾಡುವ ಉದ್ದೇಶಕ್ಕಾಗಿ ತಾವು ಅವಶ್ಯವೆಂದು ತಿಳಿದಿರುವ ಮತ್ತು ನಂಬಿರುವಷ್ಟರ ಮಟ್ಟಿಗಿನ ಎಲ್ಲಾ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಪಡೆದಿರುವನೇ ಎಂಬುದನ್ನು;

(ಬಿ) ಆತನ ಅಭಿಪ್ರಾಯದಲ್ಲಿ, ಸಹಕಾರ ಸಂಘವು ಸೂಕ್ತ ಲೆಕ್ಕಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುತ್ತಿದೆಯೇ ಮತ್ತು ಸಂಘದ ಶಾಖೆಗಳಿಂದ ಅಥವಾ ಕಛೇರಿಗಳಿಂದ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ವಿಧ್ಯುಕ್ತ ವರದಿಗಳನ್ನು ಸ್ವೀಕರಿಸಲಾಗಿದೆಯೇ ಎಂಬುದನ್ನು;

(ಸಿ) ಸಹಕಾರ ಸಂಘದ ಲೆಕ್ಕಪರಿಶೋಧಕನನ್ನು ಹೊರತುಪಡಿಸಿ ಇತರ ವ್ಯಕ್ತಿಯು ಲೆಕ್ಕಪರಿಶೋಧನೆ ಮಾಡಿರುವ ಲೆಕ್ಕಪರಿಶೋಧನಾ ವರದಿಯನ್ನು ಹೇಗೆ ಪರಿಗಣಿಸಿದ್ದಾನೆ ಎಂಬುದನ್ನು

(ಡಿ) ವರದಿಯಲ್ಲಿ ಉಲ್ಲೇಖಿಸಲಾಗಿರುವ ಸಹಕಾರ ಸಂಘದ ಆಸ್ತಿ ಹೊಣೆ ಪಟ್ಟಿ (ಅಡಾವೆ ಪತ್ರಿಕೆ)ಯು ಮತ್ತು ಲಾಭ ಮತ್ತು ನಷ್ಟದ ಲೆಕ್ಕವು, ಲೆಕ್ಕಪುಸ್ತಕಗಳೊಡನೆ ಮತ್ತು ವಿಧ್ಯುಕ್ತ ವರದಿಗಳೊಡನೆ ತಾಳೆಯಾಗುವುದೇ ಎಂಬುದನ್ನು

–ಸಹಾ ತಿಳಿಸಬೇಕಿರುತ್ತದೆ.

ಕಾಯ್ದೆ ಕಲಂ ೬೩(೧೭) ರನ್ವಯ ಲೆಕ್ಕಪರಿಶೋಧನಾ ವರದಿಯು

(ಎ) ಲೆಕ್ಕಪರಿಶೋಧನೆಯಲ್ಲಿ ಅವಲೋಕಿಸಿದ ದೋಷಗಳ ಅಥವಾ ಅವ್ಯವಹಾರಗಳ ಎಲ್ಲಾ ವಿವರಗಳು ಅಥವಾ ಆರ್ಥಿಕ ಅಕ್ರಮಗಳು ಮತ್ತು ಹಣದುರುಪಯೋಗ ಅಥವಾ ನಿಧಿಗಳ ದುರ್ವಿನಿಯೋಗ ಅಥವಾ ಮೋಸ ಆಗಿರುವಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಫರ್ಮು ಆ ಅವ್ಯವಹಾರದಲ್ಲಿನ ಕಾರ್ಯರೀತಿ, ವಹಿಸಿಕೊಡುವಿಕೆ ಮತ್ತು ಒಳಗೊಂಡಿರುವ ಮೊತ್ತದ ಬಗ್ಗೆ ತನಿಖೆ ನಡೆಸತಕ್ಕದ್ದು ಮತ್ತು ಅಂಥ ನಿಧಿಗಳ ದುರುಪಯೋಗ ಅಥವಾ ದುರ್ವಿನಿಯೋಗ ಅಥವಾ ಮೋಸಕ್ಕೆ, ಪ್ರಸಂಗಾನುಸಾರ ಆಡಳಿತ ಮಂಡಳಿಯ ಸದಸ್ಯರ ಅಥವಾ ಸಹಕಾರ ಸಂಘದ ನೌಕರರ ಅಥವಾ ಇತರ ಯಾವುದೇ ವ್ಯಕ್ತಿಯ ಮೇಲೆ ಜವಾಬ್ದಾರಿ ನಿಗದಿಪಡಿಸಿ ತತ್ಸಂಬಂಧದ ಎಲ್ಲಾ ಅಗತ್ಯ ಸಾಕ್ಷ್ಯವನ್ನು ನೀಡಬೇಕಾಗಿರುತ್ತದೆ.

(ಬಿ) ಲೆಕ್ಕನಿರ್ವಹಣಾ ಅಕ್ರಮಗಳ ಮತ್ತು ಅವುಗಳಿಂದ ಲಾಭ ನಷ್ಟದ ಮೇಲೆ ಸಂವಾದಿಯಾಗಿ ಆಗುವ ಪರಿಣಾಮವನ್ನು ಒಳಗೊಂಡಂತೆ ಆರ್ಥಿಕ ತ:ಖ್ತೆಗಳ ಮೇಲಾಗುವ ಪರಿಣಾಮಗಳ ಎಲ್ಲಾ ವಿವರಗಳನ್ನು ತಿಳಿಸಬೇಕಾಗಿರುತ್ತದೆ. (ನಿಯಮ ೨೯ರ ಉಪ ನಿಯಮ ೪)

(ಸಿ) ಸಹಕಾರ ಸಂಘದ ಸಾಮಾನ್ಯ ನಿಕಾಯದ, ಆಡಳಿತ ಮಂಡಳಿಯ ಮತ್ತು ಉಪ ಸಮಿತಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಅದರಲ್ಲಿ ಯಾವುದೇ ಅಕ್ರಮಗಳನ್ನು ಅಥವಾ ಉಲ್ಲಂಘನೆಗಳನ್ನು ಅವಲೋಕಿಸಿದಲ್ಲಿ, ಅಂತಹ ಅಕ್ರಮ ಮತ್ತು ಉಲ್ಲಂಘನೆಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿರುತ್ತದೆ.

(ಡಿ) ನಿಯಮಿಸಬಹುದಾದಂಥ ಎಲ್ಲಾ ಷೆಡ್ಯೂಲುಗಳು ಮತ್ತು ಇತರ ತ:ಖ್ತೆಗಳು. (ನಿಯಮ ೨೯ರ ಉಪ ನಿಯಮ ೩)

–ಇವುಗಳನ್ನು ಹೊಂದಿರಬೇಕಾಗಿರುತ್ತದೆ.

ಕಾಯ್ದೆ ಕಲಂ ೬೩(೧೮) ರನ್ವಯ (೧೪)ನೇ ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (೧೫)ನೇ ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (೧೬)ನೇ ಉಪ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯದ ಬಗ್ಗೆ ನಕರಾತ್ಮಕವಾಗಿ ಅಥವಾ ಷರತ್ತುಬದ್ಧ ಅವಲೋಕನದೊಂದಿಗೆ ಉತ್ತರಿಸಿದಾಗ, ಲೆಕ್ಕಪರಿಶೋಧಕನ ವರದಿಯಲ್ಲಿ ಆ ಉತ್ತರಕ್ಕಾಗಿ ಕಾರಣವನ್ನು ತಿಳಿಸಬೇಕಿರುತ್ತದೆ (ನಿಯಮ ೨೯ರ ಉಪ ನಿಯಮ ೨)

ನಿಯಮ ೩೦ ರನ್ವಯ ಸಹಕಾರ ಸಂಘದ ಯಾವುದೇ ಸಹಕಾರಿ ವರ್ಷದ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿದ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧನಾ ಫರ್ಮ್‌ಗೆ ಸಂಭಾವನೆಯನ್ನು ಸಂಬಂಧಿಸಿದ ಸಹಕಾರ ಸಂಘದ ಆಡಳಿತ ಮಂಡಳಿಯು ಅದರ ದುಡಿಯುವ ಬಂಡವಾಳ ಮತ್ತು ವಹಿವಾಟನ್ನು ಆಧರಿಸಿ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಯನ್ವಯ ಪಾವತಿಸಬೇಕಿರುತ್ತದೆ.



**"ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು"**

**ಮಹಾತ್ಮ ಗಾಂಧೀಜಿ**

**"ಪ್ರತಿ ಗ್ರಾಮದಲ್ಲಿ ನನಗೆ ಉತ್ತಮ ಸಹಕಾರ ಸಂಘ, ಉತ್ತಮ ಶಾಲೆ ಮತ್ತು ಒಂದು ಉತ್ತಮ ಗ್ರಾಮ ಪಂಚಾಯಿತಿಯನ್ನು ಕೊಡಿ, ನಾನು ನಿಮಗೆ ರಾಮರಾಜ್ಯವನ್ನು ಕೊಡುತ್ತೇನೆ".**



**ಪಂಡಿತ್ ಜವಹರ್‌ಲಾಲ್ ನೆಹರು**

## ನಿರ್ದೇಶಕರ ನುಡಿ

ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ಸದುದ್ದೇಶದಿಂದ ಸರ್ಕಾರವು ಇ-ಗವರ್ನನ್ಸ್ ತಂತ್ರವನ್ನು ರಾಜ್ಯದ ಬಹುತೇಕ ಎಲ್ಲಾ ಇಲಾಖೆಗಳಲ್ಲಿಯೂ ಅಳವಡಿಸುತ್ತಿದೆ. ಘನ ಸರ್ಕಾರದ ಈ ಪ್ರಗತಿಪರ ಹಾದಿಯಲ್ಲಿ ನಡೆದಿರುವ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯು ಕೇವಲ ಆಡಳಿತದಲ್ಲಿ ಮಾತ್ರವೇ ಪಾರದರ್ಶಕತೆಯನ್ನು ತರುವುದಷ್ಟೇ ಅಲ್ಲದೆ, ಸಹಕಾರಿ ಸಂಸ್ಥೆಗಳ ಸಂಕ್ಷಿಪ್ತ ಮಾಹಿತಿಯನ್ನು ಹಾಗೂ ಅರ್ಹ ಲೆಕ್ಕಪರಿಶೋಧಕರ ವಿವರಗಳನ್ನು ಈಗ ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಿರುವುದರಿಂದ ವೆಬ್‌ಸೈಟ್‌ನಲ್ಲಿ ಸಾಮಾನ್ಯ ಜನರಿಂದ ಸರ್ಕಾರದವರೆಗೆ ಎಲ್ಲರೂ ರಾಜ್ಯದ ಸಹಕಾರಿ ಸಂಸ್ಥೆಗಳ ಅಗತ್ಯ ಮಾಹಿತಿಯನ್ನು ಪಡೆಯಬಹುದಾಗಿದೆ. ಉದಾಹರಣೆಗೆ ಒಂದು ಸಂಘದಲ್ಲಿ ಹಣ ತೊಡಗಿಸುವ ವ್ಯಕ್ತಿ ಸಂಘದ ಆರ್ಥಿಕ ಪರಿಸ್ಥಿತಿಯ ಬಗೆಗಿನ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪಡೆದು ತನಗೆ ತೃಪ್ತಿಯಾದ ನಂತರ ಅಲ್ಲಿ ಹಣ ತೊಡಗಿಸಬಹುದಾಗಿದೆ. ಅದೇ ರೀತಿ ಸರ್ಕಾರದ ಯಾವುದೇ ಮಟ್ಟದ ಅಧಿಕಾರಿಗಳು ಸಂಘದ ವ್ಯವಹಾರ, ಅದರ ಆರ್ಥಿಕ ಸ್ಥಿತಿ ಮತ್ತು ಅಲ್ಲಿ ನಡೆಯುತ್ತಿರುವ ವ್ಯವಹಾರಗಳ ಬಗ್ಗೆ ಸ್ಥೂಲ ಚಿತ್ರಣವನ್ನು ಪಡೆಯಬಹುದು.

ನಿರ್ದೇಶಕರು,<br>
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ.